ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 4, September-October 2022, Pp. 100-105
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ದ್ರಾವಿಡ ಚಳವಳಿ ಮಹಾನಾಯಕ ಪೆರಿಯಾರ್

**ಶಿವುಕುಮಾರ ಎಂ***

*ಸಂಶೋಧನಾ ವಿದ್ಯಾರ್ಥಿ, ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

***Abstract:***

*ಸುಮಾರು ಐದು ಸಾವಿರ ವರ್ಷದ ಸಾಂಸ್ಕೃತಿಕ ಇತಿಹಾಸ ಇರುವ ಭಾರತೀಯ ಉಪಖಂಡದಲ್ಲಿ ಉತ್ತರ ಭಾಗವನ್ನು ಆರ್ಯ ಪ್ರದೇಶವೆಂದೂ ದಕ್ಷಿಣ ಭಾರತದ ತಮಿಳುನಾಡು, ಕೇರಳ, ಕರ್ನಾಟಕ, ಆಂಧ್ರ ಮುಂತಾದ ಪ್ರದೇಶಗಳನ್ನು ದ್ರಾವಿಡ ಪ್ರದೇಶವೆಂದು ಸಾಮಾನ್ಯವಾಗಿ ಗುರುತಿಸಲಾಗುತ್ತದೆ. ಈ ಪ್ರಭೇದಗಳು ಕೇವಲ ಇತಿಹಾಸಕಾರರ ಸೃಷ್ಟಿ ಎನ್ನುವ ವಾದವಿದ್ದರೂ, ಇಪ್ಪತ್ತನೇ ಶತಮಾನದ ಆದಿಭಾಗದಲ್ಲಿ ತಮಿಳುನಾಡಿನಲ್ಲಿ ಪ್ರಬಲಗೊಂಡ 'ದ್ರಾವಿಡ ಚಳವಳಿಯ'ಯು ಈ ಸಿದ್ಧಾಂತವನ್ನೇ ಆಧರಿಸಿದೆ. ಸುಮಾರು ಕ್ರಿ. ಪೂ. 3000 ಇಸ್ವಿಯ ಕಾಲಕ್ಕೆ ಉತ್ತರ ಭಾರತಕ್ಕೆ ಆರ್ಯ ಜನಾಂಗದ ಪ್ರವೇಶವಾದೊಡನೆ ದ್ರಾವಿಡರು ದಕ್ಷಿಣಕ್ಕೆ ಚಲಿಸಿ ಈ ಭಾಗದ ಆದಿವಾಸಿಗಳೊಂದಿಗೆ ಬೆರೆತು ಬದುಕಲಾರಂಭಿಸಿದರು ಹಾಗೂ ಕ್ರಿ. ಪೂ. 1000 ದ ಸಮಯದಲ್ಲಿ ಆರ್ಯರು ತಮ್ಮ ನೆಲೆ ವಿಸ್ತರಿಸಿಕೊಂಡು ದ್ರಾವಿಡ ಜನರೊಂದಿಗೆ ಬೆರೆತು ಬದುಕಲಾರಂಭಿಸಿದರು ಎಂದು ತಿಳಿಯಲಾಗಿದೆ. ತಮಿಳು ರಾಜಮನೆತನದವರು ಆರ್ಯ ಪುರೋಹಿತರನ್ನು ದಕ್ಷಿಣಕ್ಕೆ ಬರಮಾಡಿಕೊಂಡರು ಎನ್ನುವ ಇನ್ನೊಂದು ಪ್ರಬಲವಾದ ವಾದವಿದೆ. ದ್ರಾವಿಡ ಚಳುವಳಿ ಮತ್ತು ಮಹಾನಾಯಕ ಪೆರಿಯಾರ್ ಕುರಿತಂತೆ ಅಧ್ಯಯನ ಸಾಗಿದರೆ ಅನೇಕ ಆಸಕ್ತಿದಾಯಕ ವಿಷಯಗಳು ಕಂಡು ಬರುತ್ತವೆ ಈ ಹಿನ್ನಲೆಯಿಂದ ಪ್ರಸ್ತುತ ಅಧ್ಯಯನ ಸಾಗಿದೆ. ಇದರ ವ್ಯಾಪ್ತಿಯು ಶಿರ್ಷಿಕೆಯಲ್ಲಿ ಇದೆ. ಈ ಹಿನ್ನಲೆಯಿಂದ ಇಲ್ಲಿ ಚರ್ಚಿಸುವ ಕೆಲಸವನ್ನು ಮಾಡಲಾಗಿದೆ.*

**Keywords:** *ಪೆರಿಯಾರ್, ರಾಮಸ್ವಾಮಿ ನಾಯ್ಕರ್, ದ್ರಾವಿಡ ಚಳವಳಿ, ಹೋರಾಟ.*

## ಪೀಠಿಕೆ

1925 ರಲ್ಲಿ ಕಾಂಗ್ರೆಸ್ ಪಕ್ಷವನ್ನು ತೊರೆದು ಹೊರನಡೆದ ಇ. ವಿ. ರಾಮಸ್ವಾಮಿ ನಾಯ್ಕರ್ ಒಂದು ಪರ್ಯಾಯವಾದ ಸಾಂಸ್ಕೃತಿ ವೇದಿಕೆಯನ್ನು ಪ್ರಾರಂಭಿಸುವ ಇಚ್ಛೆಯಿಂದ ಹಾಗೂ ದ್ರಾವಿಡ ಜನರ ಉನ್ನತಿಯ ಉದ್ದೇಶವನ್ನು ಈಡೇರಿಸುವ ದೃಷ್ಟಿಯಿಂದ "ಆತ್ಮಗೌರವ ಚಳವಳಿ" (Self Respect Movement) ಯನ್ನು ಹುಟ್ಟು ಹಾಕಿದರು. ಆತ್ಮಗೌರವ ಚಳವಳಿಯು ಸಮಸ್ತ ಹಿಂದೂ ಜೀವನವನ್ನು ನಿಯಂತ್ರಣಕ್ಕೊಳಪಡಿಸಿದ ಬ್ರಾಹ್ಮಣ ಷಡ್ಯಂತ್ರವನ್ನು ಬಯಲಿಗೆಳೆಯುವ ವೇದಿಕೆಯೆಂದು ಪರಿಗಣಿಸಲಾಯಿತು.

ರಾಬರ್ಟ್ ಇಂಗರ್‌ಸಲ್ ಅವರ ಕೃತಿಗಳನ್ನು ತಮಿಳಿಗೆ ಭಾಷಾಂತರಿಸಿ ಬ್ರಾಹ್ಮಣೇತರ ಜಾತಿ ವರ್ಗಗಳ ಮೇಲೆ ಮೇಲ್ಜಾತಿಗಳ ದಬ್ಬಾಳಿಕೆಯ ಖಂಡನೆ, ಪುರಾಣಗಳು ಕಟ್ಟುಕಥೆಗಳೆಂದೂ ಅವೈಚಾರಿಕತೆಯಿಂದ ಕೂಡಿವೆಯೆಂದೂ ವಾದ ಮಂಡನೆ, ಮನುಧರ್ಮಶಾಸ್ತ್ರದ ಅಮಾನವೀಯ ತತ್ವ ಸಿದ್ಧಾಂತಗಳನ್ನು ಬಯಲಿಗೆಳೆಯುವುದು, ಜಾತಿ ಸಂಪ್ರದಾಯಗಳು, ಬಾಲ್ಯವಿವಾಹ, ಮಹಿಳೆಯರ ಮೇಲೆ ವೈಧವ್ಯದ ಹೇರಿಕೆ ಇತ್ಯಾದಿ ಗೊಡ್ಡು ಸಂಪ್ರದಾಯಗಳಿಗೆ ವಿರೋಧ, ಪ್ರಗತಿಪರ ಹಾಗೂ

***Please cite this article as:*** ಶಿವುಕುಮಾರ ಎಂ. (2022). ದ್ರಾವಿಡ ಚಳವಳಿ ಮಹಾನಾಯಕ ಪೆರಿಯಾರ್. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(4), 100–105.

ವೈಚಾರಿಕತೆಯನ್ನು ಜನರಿಗೆ ತಲುಪಿಸಲು 'ಕುದಿಯರಸು' (ಜನತಾ ಸರ್ಕಾರ) ಎನ್ನುವ ಪತ್ರಿಕೆಯ ಪ್ರಕಟಣೆ ಇತ್ಯಾದಿಗಳು ಆತ್ಮಗೌರವ ಚಳವಳಿಯ ಪ್ರಧಾನ ಅಂಶಗಳಾಗಿದ್ದವು.

ಪೆರಿಯಾರ್ 1931ರಲ್ಲಿ ಸೋವಿಯತ್ ಪ್ರವಾಸದಿಂದ ಹಿಂದಿರುಗಿದ ಮೇಲೆ ಲೌಕಿಕವಾದವೇ ಭಾರತದ ಸಮಸ್ಯೆಗಳಿಗೆ ಉತ್ತರವೆಂದು ವಾದಿಸತೊಡಗಿದರು. ಆದರೆ 1933–34ರ ಸಮಯದಲ್ಲಿ ಜೈಲು ವಾಸಕ್ಕೊಳಗಾಗಿ ಮರಳಿದ ನಂತರ ಯಾವುದಾದರೊಂದು ರಾಜಕೀಯ ಪಕ್ಷವನ್ನು ಸೇರಿ ಹೋರಾಡುವ ಆಲೋಚನೆ ಮಾಡಿದರು. ಹದಿನಾಲ್ಕು ಅಂಶಗಳ ಕಾರ್ಯ–ಯೋಜನೆಯನ್ನು ತಯಾರಿಸಿ ಕಾಂಗ್ರೆಸ್ ಹಾಗೂ ಜಸ್ಟೀಸ್ ಪಕ್ಷಕ್ಕೆ ಅನುಮೋದನೆಗಾಗಿ ಸಲ್ಲಿಸಿದರು. ಕಾಂಗ್ರೆಸ್ ಪಕ್ಷ ಈ ಯೋಜನೆಗೆ ಸಮ್ಮತಿಸಲಿಲ್ಲ. ಆದರೆ ಆ ಸಮಯದಲ್ಲಿ ರಾಜಕೀಯ ಹಿನ್ನಡೆ ಅನುಭವಿಸಿದ್ದ ಜಸ್ಟಿಸ್‌ಪಕ್ಷವು ಈ ಕಾರ್ಯಯೋಜನೆಗೆ ಒಪ್ಪಿಗೆ ನೀಡಿ ಪೆರಿಯಾರ್‌ರನ್ನು ಪಕ್ಷದಲ್ಲಿ ಸೇರಿಸಿಕೊಂಡು ಬಲವೃದ್ಧಿ ಮಾಡಿಕೊಂಡಿತು.

ಮುಂದೆ ಹಿಂದಿ ಭಾಷಾ ವಿರೋಧಿ ಚಳವಳಿ ಒಂದು ಜನಜನಿತ ಗ್ರಹಿಕೆಯಂತೆ ಪೆರಿಯಾರ್ ಅವರಿಗೆ 'ಹಿಂದೀ ಭಾಷಾ ವಿರೋಧಿ' ಮತ್ತು 'ಮರ್ಯಾದಾ ಪುರುಷೋತ್ತಮ ಶ್ರೀರಾಮನನ್ನು ಹೀಗೆಳೆದ ನೀಚ' ಎನ್ನುವ ಪಟ್ಟವನ್ನು ಮಾಧ್ಯಮಗಳು ಕಟ್ಟಿವೆ. ಆದರೆ ಇದೇ ಪೆರಿಯಾರ್ 1902ರಲ್ಲಿ ತನ್ನ ಮನೆಯನ್ನೇ 'ಹಿಂದಿ' ಪ್ರಚಾರದ ವಿದ್ಯಾಪೀಠವೊಂದಕ್ಕೆ ಕೊಟ್ಟಿದ್ದರು ಎನ್ನುವುದನ್ನು ಯಾಕೆ ಯಾರೂ ಸ್ಮರಿಸುವುದಿಲ್ಲ? ಪೆರಿಯಾರ್ ಅವರ ಭಾಷಾ ಪ್ರೇಮ ಮಾತ್ರ; ಒಂದು ಭಾಷೆಯವರು ಇನ್ನೊಂದು ಭಾಷೆಯವರನ್ನು ಹೀಗಳೆಯುವುದನ್ನು ಸಹಿಸುತ್ತಿದ್ದಿಲ್ಲ. ಅದಲ್ಲದೆ ಅವರ ಸಮಕಾಲೀನ ಸಂದರ್ಭದಲ್ಲಿ ಹಿಂದಿ ಭಾಷೆಯ ಮುಖೇನ ಮೇಲ್ವರ್ಗದವರು ತಮ್ಮದಾದ ಒಂದು 'ಗುಪ್ತ' ಅಜೆಂಡಾವನ್ನು ಕಾರ್ಯಗತಗೊಳಿಸುವ ಹುನ್ನಾರವನ್ನು ಈ ದೇಶದಲ್ಲಿ ಮೊತ್ತಮೊದಲಿಗೆ ಗುರುತಿಸಿದವರು ಪೆರಿಯಾರ್. ಇಲ್ಲಿ ಪ್ರಾಚೀನ ಕಾಲದಲ್ಲಿ ಸಂಸ್ಕೃತ, ಮಧ್ಯಕಾಲದಲ್ಲಿ ಪರ್ಶಿಯನ್ ಮತ್ತು ಅಧುನಿಕ ಕಾಲದಲ್ಲಿ ಇಂಗ್ಲಿಷ್ ಶ್ರಮಿಕರನ್ನು ಸದೆಬಡಿದಿತ್ತು.

ಸ್ವಾತಂತ್ರೋತ್ತರ ಕಾಲದಲ್ಲಿ ಹಿಂದಿ ಶ್ರಮಿಕರ ಕತ್ತು ಹಿಸುಕಲು ಸನ್ನದ್ಧವಾಗಿತ್ತು. ಹೀಗೆ ಹಿಂದಿಯ ನೆಪದಲ್ಲಿ ಹಳೆಯ ಏಣಿಶ್ರೇಣಿಯ ವೈದಿಕ ತತ್ವಗಳನ್ನೇ ಪ್ರಚಾರ ಮಾಡಿ; ಜನಸಾಮಾನ್ಯರ ಮೆದುಳು ತೊಳೆಯ ಬಯಸಿದ ಆಡಳಿತಶಾಹಿಯ ಕುತಂತ್ರವನ್ನು ತಡೆಯುವುದಕ್ಕಾಗಿಯೇ 'ಹಿಂದಿ ವಿರೋಧ' ಎನ್ನುವ ವಾಗ್ವಾದಕ್ಕೆ ಪೆರಿಯಾರ್ ಚಾಲನೆ ನೀಡುವುದು ಆನಂತರದ ದಿನಗಳಲ್ಲಿ ಅವರಿಗೆ ಅನಿವಾರ್ಯ ವಾಯಿತು. ಆದರೆ ಅವರ ವಾಗ್ವಾದಕ್ಕೆ ಅಪಾರ್ಥ ಕಲ್ಪಿಸಿ ಪುರೋಹಿತಶಾಹಿ ಪ್ರಾಬಲ್ಯದ ಮಾಧ್ಯಮಗಳು ಪೆರಿಯಾರ್ ಅವರನ್ನು ಹಿಂದಿ ವಿರೋಧಿಯನ್ನಾಗಿ ಚಿತ್ರಿಸಿತು. ಅದೇ ರೀತಿ ತುಂಬು ಬಸುರಿ ಸೀತೆಯನ್ನು ಸಂಶಯದ ನೆಲೆಯಲ್ಲೇ ಬೀದಿಪಾಲು ಮಾಡಿದ, ತಪಸ್ವಿ ಶಂಭೂಕನ ತಲೆಕಡಿದ, ಯಜ್ಞಯಾಗಗಳ ನೆಪದಲ್ಲಿ ಮೂಲನಿವಾಸಿಗಳ ಸಂಸ್ಕೃತಿಗಳ ಮೇಲಿನ ಹಲ್ಲೆ ನಡೆಸಿದ ಪರಿಸರ ಪ್ರದೂಷಣೆಯ ಸಮರ್ಥಕನನ್ನೇ ಪ್ರಶ್ನಿಸಿದ ಹಣ್ಣು ಮುದುಕಿ ತಾಟಕಿಯ ತಲೆಕಡಿದ ಅಯೋಧ್ಯೆಯ ರಾಮನ ಚರ್ಯೆಯನ್ನೇ ವಿವೇಚನೆಗೆ ಒಡ್ಡಿದ ಪೆರಿಯಾರ್ ಅವರನ್ನು "ಮರ್ಯಾದಾ ಪುರುಷೋತ್ತಮ ಶ್ರೀರಾಮನನ್ನು ಹೀಗೆಳೆದ ನೀಚನೆಂದು" ಅಂದಿನ ಸುದ್ದಿಮಾಧ್ಯಮಗಳು ಬಹುವಾಗಿಯೇ ಗುಲ್ಲು ಎಬ್ಬಿಸಿದವು. ಆದರೆ ಅದಕ್ಕೆಲ್ಲಾ ಸೊಪ್ಪುಹಾಕದ ಪೆರಿಯಾರ್; ಒಂದು ಭಾಷೆಯ ಮೇಲೆ ಇನ್ನೊಂದು ಭಾಷೆ, ಒಂದು ಸಂಸ್ಕೃತಿಯ ಮೇಲೆ ಇನ್ನೊಂದು ಸಂಸ್ಕೃತಿ ಸವಾರಿ ಮಾಡುವುದನ್ನು ಯಾವತ್ತೂ ಸಹಿಸಲಿಲ್ಲ. ಮಾತ್ರವಲ್ಲದೆ 'ಪ್ರಾದೇಶಿಕ' ಅನನ್ಯತೆಯೊಂದು 'ಹುಸಿ' ರಾಷ್ಟ್ರೀಯತೆಯ ಉರಿಯಲ್ಲಿ 'ಕಮರಿ'

ಹೋಗುವುದನ್ನು ಅವರು ಸಹಿಸಲಿಲ್ಲ. ಅದಕ್ಕೆಂದೇ ಅವರು ಸ್ವತಂತ್ರ ಭಾರತದಲ್ಲಿ ಹಿಂದಿ ಭಾಷೆಯ ಸಾಮಂತಶಾಹಿ ಪ್ರಭುತ್ವವನ್ನೂ ಪ್ರಶ್ನಿಸಿ, ಪ್ರತಿಭಟಿಸುತ್ತಲೇ ಬೀದಿಗಿಳಿದರು. ಅಂದಿನ ಪ್ರಭಾವಿ ರಾಜಕಾರಣಿ ಚಕ್ರವರ್ತಿ ರಾಜಗೋಪಾಲಾಚಾರಿ ದಿಲ್ಲಿ ಮತ್ತು ಮದ್ರಾಸಿನ ಇಕ್ಕೆಲದಲ್ಲೂ ನಡೆಸುತ್ತಿದ್ದ ಎಡಬಿಡಂಗಿ ಭಾಷಾನೀತಿಯ ಹಿಂದೆ; ಅವರದ್ದೇ ಆದ ಸ್ವಾರ್ಥಪರ ಸ್ವಕೀಯ ಅಧಿಕಾರಗ್ರಹಣದ ವಾಸನೆಯನ್ನು ಸೂಕ್ಷ್ಮವಾಗಿ ಗಮನಿಸಿದರು ಪೆರಿಯಾರ್. ಹೀಗಾಗಿ ಅದಕ್ಕೆಲ್ಲಾ ಪ್ರಬಲ ಪ್ರತಿಭಟನೆ ನೀಡಿದವರೂ ಕೂಡಾ ಪೆರಿಯಾರ್ ಎನ್ನುವುದನ್ನು ಮರೆಯುವುದೆಂತು? ಒಟ್ಟಿನಲ್ಲಿ ನಮ್ಮ–ನಮ್ಮ ತಾಯಿನುಡಿಗಳೇ ಎಲ್ಲೆಲ್ಲೂ ಅನ್ನದ ನುಡಿಯಾಗಬೇಕು. ಅದು ಅನ್ನದ ನುಡಿಯಾಗಬೇಕಾದರೆ ಅದಕ್ಕೆ ಅಧಿಕಾರದ ನುಡಿಯಾಗುವ ಅವಕಾಶ ದಕ್ಕಬೇಕು. ಹೀಗೆ ಅವಕಾಶ ದಕ್ಕಿದರೆ ಮಾತ್ರ; ಅಲ್ಲಿನ ಜನಭಾಷೆ, ಜನಸಂಸ್ಕೃತಿ, ಗಡಿಭಾಷೆಗಳು, ಗಡಿನಾಡ ಸಂಸ್ಕೃತಿಗಳು ಹೀಗೆ ಎಲ್ಲವೂ ಸಹಬಾಳ್ವೆ ಮಾಡುವ ಎಚ್ಚರ ಜಾಗೃತವಾಗಬಹುದು. ಅದೇ ನಮ್ಮ ಒಕ್ಕೂಟ ರಾಷ್ಟ್ರದ 'ತತ್ವ' ಮತ್ತು 'ಸತ್ವ' ಎನ್ನುವುದನ್ನು ಮರೆಯದಿರೋಣ. ಬ್ರಾಹ್ಮಣ ಧರ್ಮ, ವೇದ ಪುರಾಣ, ಇತಿಹಾಸ ನಮಗೆ ಬೇಕಿಲ್ಲ. ಅವನ್ನೆಲ್ಲ ತ್ಯಜಿಸಬೇಕು ಇಲ್ಲವೇ ನಿರ್ನಾಮ ಮಾಡಬೇಕು ಎಂದು ನಿರ್ಧರಿಸಿಕೊಂಡು, ಆ ದಿಶೆಯಲ್ಲಿ ಕಾರ್ಯಪ್ರವೃತ್ತರಾಗಿರುವ ಸಂದರ್ಭದಲ್ಲಿ ಹಾರುವವರ ಧರ್ಮ, ಶಾಸ್ತ್ರ, ದೇವರುಗಳನ್ನೆ ಬೋಧಿಸುವ ಹಿಂದಿ ಭಾಷೆಯು ನಮಗೆ ಬೇಕೇನು? ನಾವು ಅದನ್ನು ಒಪ್ಪಿಕೊಳ್ಳುವುದಕ್ಕಾಗುತ್ತದೆಯೇ? ಎಂದು ಪ್ರಶ್ನಿಸಿದರು. ಮುಂದೆ 1937ರಲ್ಲಿ ಅಧಿಕಾರಕ್ಕೇರಿದ ರಾಜಗೋಪಾಲಾಚಾರಿ ನೇತೃತ್ವದ ಕಾಂಗ್ರೆಸ್ ಸರ್ಕಾರ ಶಾಲೆಗಳಲ್ಲಿ ಹಿಂದಿ ಕಲಿಕೆ ಕಡ್ಡಾಯಗೊಳಿಸುವ ಕ್ರಮವನ್ನು ತೆಗೆದುಕೊಂಡಿತು. ಈ ಕ್ರಮವನ್ನು ತಮಿಳು ಭಾಷೆ ಮತ್ತು ಸಂಸ್ಕೃತಿಯ ಮೇಲಿನ ದಾಳಿ ಎಂದು ಪರಿಗಣಿಸಿದ ತಮಿಳು ಪ್ರೇಮಿಗಳು ಹಿಂಸಾತ್ಮಕ ಪ್ರತಿಭಟನೆಯನ್ನು ಪ್ರಾರಂಭಿಸಿದರು. ಹಿಂದಿಯು ತಮಿಳನ್ನು ಶೋಷಣೆಯ ಭಾಷೆಯಾಗಿ ನೋಡುತ್ತದೆ ಎಂಬ ವಿಚಾರವನ್ನು ಪ್ರತಿಪಾದಿಸಿದ ಪೆರಿಯಾರ್ ಅವರು ಪ್ರಾದೇಶಿಕ ಶೋಷಣೆಯನ್ನು ಗಂಭೀರವಾಗಿ ಟೀಕಿಸಿದರು. ಹಿಂದೆ ಭಾಷಾ ವಿರೋಧಿ ಚಳವಳಿಯು ನಾಯ್ಕರ್ ಅವರು ಪ್ರಾರಂಭಿಸಿದ ಬ್ರಾಹ್ಮಣ ವಿರೋಧಿ ಹಾಗೂ ಸರ್ಕಾರ ವಿರೋಧಿ ಚಳವಳಿಗೆ ಪ್ರಧಾನ ರಂಗವಾಗಿ ಪರಿಣಮಿಸಿತು. ಪೊಲೀಸ್ ಗೋಲಿಬಾರ್‌ನಲ್ಲಿ ಎರಡು ಮಂದಿ ಜೀವ ಕಳೆದುಕೊಂಡಾಗ ಸರ್ಕಾರವು ಹಿಂದಿಯನ್ನು ಕಡ್ಡಾಯಗೊಳಿಸುವುದನ್ನು ಕೈಬಿಟ್ಟು ಆಯ್ಕೆಯ ವಿಷಯವನ್ನಾಗಿ ಬದಲಾಯಿಸಬೇಕಾಯಿತು. ಈ ಚಳವಳಿಯಲ್ಲಿ ಪೆರಿಯಾರ್ ಜೈಲು ಸೇರಿದರು. ತದನಂತರ 1938ರಲ್ಲಿ ಅವರು ಜಸ್ಟೀಸ್ ಪಕ್ಷದ ಅಧ್ಯಕ್ಷರಾಗಿ ಆಯ್ಕೆಯಾದರು.

ಪೆರಿಯಾರ್ ಪ್ರಕಾರ ಹಿಂದಿ ಹೇರಿಕೆಯು ತಮಿಳರ ಅನನ್ಯತೆಯ ಮೇಲಿನ ದಬ್ಬಾಳಿಕೆಯ ಪ್ರಯತ್ನ ಹಾಗೂ ಈ ದಬ್ಬಾಳಿಕೆಯನ್ನು ಒಂದು ಪರ್ಯಾಯ ಮಾದರಿಯ ಹೋರಾಟದಿಂದ ಮಾತ್ರ ಎದುರಿಸಲು ಸಾಧ್ಯ ಎಂಬುದನ್ನು ಅರಿತು 'ದ್ರಾವಿಡ ನಾಡು' ಚಳವಳಿಯನ್ನು ಆರಂಭಿಸಿದರು. ಈ ಹಿನ್ನೆಲೆಯಲ್ಲಿ ಅವರು ಪ್ರತ್ಯೇಕ 'ದ್ರಾವಿಡ ರಾಜ್ಯದ' ಸ್ಥಾಪನೆಗೆ ಕರೆ ನೀಡಿದರು. 1938ರ ಜಸ್ಟೀಸ್ ಪಕ್ಷದ ಅಧಿವೇಶದನದಲ್ಲಿ ತಮಿಳುನಾಡನ್ನು ಬ್ರಿಟಿಷ್ ಆಡಳಿತಕ್ಕೊಳಪಟ್ಟ ಒಂದು ಪ್ರತ್ಯೇಕ ರಾಜ್ಯವನ್ನಾಗಿ ಪರಿಗಣಿಸಬೇಕೆಂದು ಬೇಡಿಕೆ ಸಲ್ಲಿಸಲು ನಿರ್ಣಯಿಸಲಾಯಿತು. ಈ ಬೇಡಿಕೆಯು ಮುಂದೆ ಜಸ್ಟೀಸ್ ಪಕ್ಷ ನಡೆಸಿಕೊಂಡು ಬಂದ ಚಳವಳಿಯ ಮೂಲ ಪ್ರಶ್ನೆಯಾಗಿ ಮಾರ್ಪಟ್ಟು ಕುಂದುತ್ತಿದ್ದ ಆ ಪಕ್ಷಕ್ಕೆ ಜೀವ ನೀಡಿತು. 1939ರಲ್ಲಿ ಪೆರಿಯಾರ್ ಸ್ವತಂತ್ರವಾದ 'ದ್ರಾವಿಡ ಸ್ಥಾನ'ದ ಬೇಡಿಕೆಯೊಂದಿಗೆ 'ದ್ರಾವಿಡನಾಡು ಕಾನ್ಫರೆನ್ಸ್'ನ್ನು ಸಂಘಟಿಸಿದರು. ಮುಂದಿನ ವರ್ಷ ಪಾಕಿಸ್ತಾನ ಸ್ಥಾಪನೆ ಬೇಡಿಕೆಯನ್ನಿಟ್ಟು ಮುಸ್ಲಿಮ್

ಲೀಗ್ ಲಾಹೋರ್ ನಿರ್ಣಯವನ್ನು ಮಂಡಿಸಿದ ಮಾದರಿಯಲ್ಲಿ 'ದ್ರಾವಿಡ ಸ್ಥಾನ'ದ ಬೇಡಿಕೆಯನ್ನು ಉಚ್ಚರಿಸಲಾಯಿತು. ತಮಿಳು, ತೆಲುಗು, ಕನ್ನಡ, ಮಲಯಾಳಿ ಮುಂತಾದ ಬ್ರಾಹ್ಮಣೇತರ ದ್ರಾವಿಡ ಜನರು ಜನಾಂಗೀಯವಾಗಿ ಹಾಗೂ ಸಾಂಸ್ಕೃತಿಕವಾಗಿ ಆರ್ಯನ್ನರಿಂದ ಭಿನ್ನವಾಗಿರುವರು. ಅವರನ್ನು ಆರ್ಯನ್ನರ ಆಡಳಿತದ ಹಿಡಿತದಿಂದ ಮುಕ್ತಗೊಳಿಸುವುದೇ ದ್ರಾವಿಡ ರಾಜ್ಯದ ಆಶಯವಾಗಿತ್ತು.

**ದ್ರಾವಿಡ ಕಳಗಂ ಸ್ಥಾಪನೆ**

1944ರಲ್ಲಿ ಜಸ್ಟೀಸ್ ಪಕ್ಷವು ಪೆರಿಯಾರ್ ಅವರ ಆಶಯದಂತೆ ದ್ರಾವಿಡ ಕಳಗಂ (Dravidian Federation) ಆಗಿ ಪರಿವರ್ತನೆಗೊಂಡಿತು. ಹೊಸ ಪಕ್ಷವು ದ್ರಾವಿಡ ನಾಡಿನ ಸ್ಥಾಪನೆಗಾಗಿ ಉಗ್ರ ಹೋರಾಟಗಳನ್ನು ಸಂಘಟಿಸತೊಡಗಿತು. ಈ ಸಂದರ್ಭದಲ್ಲಿ ಪಕ್ಷದ ಉಗ್ರವಾದಿ ನೀತಿಗಳನ್ನು ಒಪ್ಪದಿರುವ ಪಿ. ಟಿ. ರಾಜನ್‌ನಂತಹ ಸಂಪ್ರದಾಯವಾದಿ ಸದಸ್ಯರು ಚಳವಳಿಯನ್ನು ತೊರೆದು ಹಿಂದಿನ ಜಸ್ಟೀಸ್ ಪಕ್ಷವನ್ನೇ ಮುನ್ನಡೆಸುವ ಪ್ರಯತ್ನವನ್ನೂ ಮಾಡಿದರು. 1945ರ ತಿರುಚಿನಾಪಳ್ಳಿ ಅಧಿವೇಶನದಲ್ಲಿ ದ್ರಾವಿಡ ಕಳಗಂ ತನ್ನದೇ ಆಗಿರುವ ಸಂವಿಧಾನವನ್ನು ಅಳವಡಿಸಿಕೊಂಡಿತು. ಮಧ್ಯದಲ್ಲಿ ಕೆಂಪು ವೃತ್ತವಿರುವ ಕಪ್ಪು ಬಾವುಟವನ್ನು ತನ್ನ ಚಿಹ್ನೆಯಾಗಿ ಅಂಗೀಕರಿಸಿತು. 'ಕಪ್ಪು' ದ್ರಾವಿಡ ಜನರ ದುಃಖವನ್ನು ಪ್ರತಿನಿಧಿಸಿದರೆ 'ಕೆಂಪು ಬಣ್ಣದ ವೃತ್ತ' ಆ ಜನರ ಆಶಾಕಿರಣದ ಸಂಕೇತ.

ದ್ರಾವಿಡ ಗಣರಾಜ್ಯದ ಸ್ಥಾಪನೆ, (ದ್ರಾವಿಡ ಗಣರಾಜ್ಯವು ಒಂದು ಸಂಯುಕ್ತ ರಾಷ್ಟ್ರವಾಗಿದ್ದು ನಾಲ್ಕು ಅಂದರೆ ತಮಿಳು, ತೆಲುಗು, ಮಲಯಾಳಂ, ಕನ್ನಡ ದ್ರಾವಿಡ ಭಾಷಾವಾರು ಪ್ರಾಂತ್ಯಗಳನ್ನು ಹೊಂದಿರುತ್ತದೆ) ಜಾತಿರಹಿತ ಸಮಾಜದ ಸ್ಥಾಪನೆ, ಸಾಮಾಜಿಕ, ಆರ್ಥಿಕ ಸಮಾನತೆ, ಶೋಷಿತ ಹಾಗೂ ದಮನಕ್ಕೊಳಗಾದ ಜನರ ಅಭ್ಯುದಯ, ವಸಾಹತುಶಾಹಿ ಹಿಡಿತದಿಂದ ಬಿಡುಗಡೆ ಇತ್ಯಾದಿ ದ್ರಾವಿಡ ಕಳಗಂನ ಪ್ರಧಾನ ಉದ್ದೇಶಗಳಾಗಿದ್ದವು.

ನಾಯ್ಕರ್ ಅವರು ಪ್ರತಿಪಾದಿಸಿದಂತೆ ಧರ್ಮ ಮತ್ತು ಸಂಪ್ರದಾಯಗಳನ್ನು ಆಧರಿಸಿದ ಎಲ್ಲಾ ರೀತಿಯ ಮೌಢ್ಯಗಳನ್ನು ತೊಡೆಯುವ ಪ್ರಯತ್ನಗಳೂ ನಡೆದವು. ತಮ್ಮ ಧಾರ್ಮಿಕ ಪಂಥವನ್ನು ಸಂಕೇತಿಸುವಂತೆ ಹಣೆಗೆ ವಿಭೂತಿ ಹಚ್ಚುವ ಸಂಪ್ರದಾಯವನ್ನು ತೊರೆಯುವಂತೆ ಪಕ್ಷದ ಸದಸ್ಯರಿಗೆ ಕರೆ ನೀಡಲಾಯಿತು, ಕಾರ್ಯಕ್ರಮಗಳಲ್ಲಿ ಬ್ರಾಹ್ಮಣ ಪೌರೋಹಿತ್ಯಕ್ಕೆ ಬಹಿಷ್ಕಾರ, ವಿಧವಾ ವಿವಾಹಕ್ಕೆ ಪ್ರೋತ್ಸಾಹ, ಅಂತರ್‌ಜಾತಿಯ ವಿವಾಹಕ್ಕೆ ಪ್ರೋತ್ಸಾಹ, ವಿವಾಹ ಸಂಪ್ರದಾಯಗಳಲ್ಲಿ ಸುಧಾರಣೆ, ಹಿಂದೂ ಧಾರ್ಮಿಕ ವಿಧಿಗಳನ್ನು ಬಹಿಷ್ಕರಿಸುವುದು, ಮೂರ್ತಿ ಪೂಜೆಯನ್ನು ತಿರಸ್ಕರಿಸುವುದು, ಮತ್ತು ಸಂಸ್ಕೃತದಲ್ಲಿ ರಚಿತವಾದ ಧಾರ್ಮಿಕ ಗ್ರಂಥಗಳನ್ನು ಬಹಿಷ್ಕರಿಸುವುದು ಆತ್ಮಗೌರವ ಚಳವಳಿಯ ಪ್ರಧಾನ ಅಂಶಗಳಾಗಿದ್ದವು.

ರಾಮಾಯಣದ ಪುನರ್ ವ್ಯಾಖ್ಯಾನ ಮತ್ತು ತಮಿಳು ಪುನರುತ್ಥಾನ, ಧಾರ್ಮಿಕ ಗ್ರಂಥ ಹಾಗೂ ಪುರಾಣದ 'ರಾಮಾಯಣ'ವನ್ನು ಬಹಿಷ್ಕರಿಸಿದ ವಿಚಾರವು ಅತಿ ಹೆಚ್ಚಿನ ಚರ್ಚೆಗೆ ಒಳಗಾಯಿತು. ಕಾರಣವೇನೆಂದರೆ ಇಲ್ಲಿ ಆರ್ಯನಾದ ರಾಮನು ನಾಯಕನಾಗಿಯೂ 'ದ್ರಾವಿಡ' ರಾಜ ರಾವಣನು ಖಳನಾಯಕನಾಗಿಯೂ ಚಿತ್ರಿತರಾಗಿದ್ದಾರೆ ಎಂದು ಪೆರಿಯಾರರು ಗ್ರಂಥವನ್ನೇ ಬಹಿಷ್ಕರಿಸಲು ಕರೆ ನೀಡುತ್ತಾರೆ. ದ್ರಾವಿಡ ನಾಡು ಚಳವಳಿಯಲ್ಲಿ 'ರಾವಣನು ನಿಜವಾದ ನಾಯಕನೆಂದು' ಬಿಂಬಿಸಲಾಯಿತು. ರಾವಣನನ್ನು ದ್ರಾವಿಡಸ್ಥಾನದ ಸಂಕೇತವಾಗಿ ಬಿಂಬಿಸುತ್ತಾ ದ್ರಾವಿಡಸ್ಥಾನ ಚಳವಳಿಗೆ ಜನಬೆಂಬಲ ಕ್ರೋಡೀಕರಿಸುವ ಉದ್ದೇಶದಿಂದ ರಾಮಾಯಣ ನಾಟಕವನ್ನು ತಮಿಳುನಾಡಿನಾದ್ಯಂತ

ಪ್ರದರ್ಶಿಸಬೇಕಾಯಿತು. ಈ ಸಂದರ್ಭದಲ್ಲಿ ತಮಿಳು ಪುನರುತ್ಥಾನದ ಪ್ರಕ್ರಿಯೆಯೂ ಆರಂಭವಾಯಿತು. ಪ್ರಾಚೀನ ತಮಿಳು ಗ್ರಂಥಗಳನ್ನು ಮರು ವ್ಯಾಖ್ಯಾನಿಸಲಾಯಿತು. ತಮಿಳು ಭಾಷೆಯನ್ನು ಸಂಸ್ಕೃತದ ಪ್ರಭಾವದಿಂದ ಮುಕ್ತಗೊಳಿಸಿ ಶುದ್ಧಗೊಳಿಸುವ ಪ್ರಕ್ರಿಯೆಯೂ ನಡೆಯಿತು. ಒಟ್ಟಾರೆಯಾಗಿ ಈ ಚಳವಳಿಯು ತಮಿಳು ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕ್ರಾಂತಿಗೆ ನಾಂದಿಯಾಯಿತು.

ಆತ್ಮಗೌರವ ಚಳವಳಿ ಮತ್ತು ದ್ರಾವಿಡ ಚಳವಳಿಯ ವೈಶಿಷ್ಟ್ಯತೆ, ಜಸ್ಟೀಸ್ ಪಕ್ಷವು ತಮಿಳುನಾಡಿನ ಬ್ರಾಹ್ಮಣೇತರ ವರ್ಗದ ಸಾಮಾಜಿಕ ಶೈಕ್ಷಣಿಕ ಹಿನ್ನಡೆಗೆ ಕಾರಣಗಳನ್ನು ಗುರುತಿಸಿ ಅವರಿಗೆ ಒಂದು ರಾಜಕೀಯ ಕಾರ್ಯಕ್ರಮ ರೂಪಿಸುವ ಪ್ರಯತ್ನದಲ್ಲಿ ತೊಡಗಿದ್ದರೆ, ಪೆರಿಯಾರ್ ಹಾಗೂ ಅವರ ಆತ್ಮಾಭಿಮಾನ ಚಳವಳಿಯ ಕಾರ್ಯಕರ್ತರು ಒಂದು ಹೆಜ್ಜೆ ಮುಂದೆ ಇಟ್ಟು ಈ ರಾಜಕೀಯ ಹೋರಾಟಕ್ಕೆ ಸಾಂಸ್ಕೃತಿಕ ಆಯಾಮವನ್ನು ನೀಡಿದರು. ಆತ್ಮಾಭಿಮಾನ ಚಳವಳಿಯು ಭಾರತದಲ್ಲಿ ಆ ಸಂದರ್ಭದಲ್ಲಿ ವ್ಯಾಪಕಗೊಂಡ ರಾಷ್ಟ್ರೀಯ ಚಳವಳಿಗೆ ಮುಖಾಮುಖಿಯಾಗಿ ಒಂದು ಪರ್ಯಾಯ ಚಿಂತನೆಯನ್ನು ಕಟ್ಟಿ ಬೆಳೆಸಿತು. ಹಾಗಾಗಿ ಈ ಚಳವಳಿಯು ಅತ್ಯಂತ ಹೆಚ್ಚಿನ ಸಂಘರ್ಷವನ್ನೇ ಎದುರಿಸಬೇಕಾಯಿತು. ಮಹಾತ್ಮಾಗಾಂಧಿಯಂತಹ ಮೇರು ವ್ಯಕ್ತಿತ್ವ ಹೊಂದಿರುವ ನಾಯಕರು ಮುನ್ನಡೆಸುತ್ತಿದ್ದ ರಾಷ್ಟ್ರೀಯ ಚಳವಳಿಗೆ ಪರ್ಯಾಯ ಚಿಂತನೆಯನ್ನು ರೂಪಿಸಿ ಗಟ್ಟಿಗೊಳಿಸುವುದು ಸುಲಭದ ಮಾತಾಗಿರಲಿಲ್ಲ. ಆ ಸಂದರ್ಭದಲ್ಲಿ ಆತ್ಮಗೌರವ ಚಳವಳಿಯು ಮಾನವ ಹಕ್ಕುಗಳ ಶ್ರೇಷ್ಠತೆಯನ್ನು ಪ್ರತಿಪಾದಿಸತೊಡಗಿತಲ್ಲದೆ ಸಮಸ್ತ ರಾಷ್ಟ್ರೀಯತೆಯ ವಾಙ್ಮಯಕ್ಕೆ ಹೊಸ ಆಯಾಮಗಳನ್ನು ಒದಗಿಸಿತು. ಈ ಚಳವಳಿಯು ಜನಪರವಾಗಿತ್ತು. ಬೌದ್ಧಿಕ ಕಸರತ್ತುಗಳಾದ ಸಂವಾದ, ಉಪನ್ಯಾಸ, ಪ್ರದರ್ಶನ, ಭಾಷಣ ಇತ್ಯಾದಿಗಳಿಂದ ಯುವಕ–ಯುವತಿಯರನ್ನು ತನ್ನೆಡೆಗೆ ಆಕರ್ಷಿಸಿತು. ಹಿಂದೂ ವಿಷಯಗಳೂ ಇದರಲ್ಲಿ ಅಡಕವಾಗಿತ್ತು. ಕವಿಗಳು, ಹಾಡುಗಾರರು, ಕಾರ್ಯಕರ್ತರ ಸಮಾಗಮವು ಆತ್ಮಗೌರವ ಚಳವಳಿಯ ಸಾಮಾನ್ಯ ಲಕ್ಷಣವಾಗಿತ್ತು. ಈ ಚಳವಳಿಯು ಭಾರತೀದಾಸನ್‌ನಂತಹ ಕವಿಗಳನ್ನೂ, ಜೀವನಂಧಮ್, ಗುರುಸ್ವಾಮಿಯಂತಹ ಬರಹಗಾರರನ್ನೂ ಸೃಷ್ಟಿಸಿತು. ಪೆರಿಯಾರ್ ರೂಪಿಸಿದ ದ್ರಾವಿಡ ಚಳವಳಿಯ ಇನ್ನೊಂದು ಮುಖ್ಯ ವೈಶಿಷ್ಟವೆಂದರೆ ಇದು ಮೇಲ್ವರ್ಗದ ಜನರ ಚಳವಳಿಯಾಗಿ ಸೀಮಿತಗೊಳ್ಳಲಿಲ್ಲ. ಒಬ್ಬ ಮಹಿಳೆ, ಒಬ್ಬ ದಲಿತ, ಓರ್ವ ನೌಕರ, ಇನ್ನೋರ್ವ ಕಾರ್ಮಿಕ ಹೀಗೆ ಸಮಾಜದ ಕೆಳಸ್ತರದ ವ್ಯಕ್ತಿಗಳು ಹಾಗೂ ಕೆಳಸ್ತರದ ವೃತ್ತಿಯನ್ನವಲಂಬಿಸಿದ ಜನರಿಂದ ತುಂಬಿಕೊಂಡಿತ್ತು. ಹಾಗಾಗಿ ಇದು ಭಾರತ ದೇಶದ ಇತಿಹಾಸದಲ್ಲೇ ಅತಿ ದೊಡ್ಡ ಮೈಲಿಗಲ್ಲಾಯಿತು.

**ಉಪಸಂಹಾರ**

ಒಟ್ಟಾರೆಯಾಗಿ ದ್ರಾವಿಡ ಚಳವಳಿಯು ತಮಿಳರನ್ನು ಒಂದು ಸಮುದಾಯವಾಗಿ ರೂಪಿಸಿತು. ದ್ರಾವಿಡ ಕಜಗಂ ಪಕ್ಷವು ತಮಿಳುನಾಡಿನಾದ್ಯಂತ ಸ್ಥಾಪಿಸಲಾದ ತನ್ನ ಶಾಖೆಗಳ ಮೂಲಕ ಜನತೆಯಲ್ಲಿ ತಮಿಳು ರಾಷ್ಟ್ರೀಯತೆಯನ್ನು ಬೆಳೆಸಿತು. ಕ್ರಾಂತಿಕಾರಿ ಭಾಷಣಗಳು, ನಾಟಕಗಳು, ಸಾಹಿತ್ಯ ಇತ್ಯಾದಿಗಳ ಮೂಲಕ ತಮಿಳುನಾಡಿನ ಹಿಂದುಳಿದ, ಶೋಷಿತ ಸಮುದಾಯಗಳಲ್ಲಿ ಆತ್ಮಪ್ರಜ್ಞೆಯನ್ನು ಮೂಡಿಸಿ ತಮ್ಮ ಅನನ್ಯತೆಗಾಗಿ ಹೋರಾಡುವಂತೆ ಪ್ರೇರೇಪಿಸಿತು. ಖ್ಯಾತ ವಿದ್ವಾಂಸ ಮೈನರ್ ವೀನರ್ ಹೇಳುವಂತೆ **"**ಸಮುದಾಯ ಆಧಾರಿತ ಸಂಘಟನೆಗಳ ರಚನೆಯೇ ಜನತೆಯಲ್ಲಿ ಸಮುದಾಯ ನಿಷ್ಠೆಯನ್ನು ಬಲಗೊಳಿಸುತ್ತವೆ**"**. ಈ ಹಿನ್ನೆಲೆಯಲ್ಲಿ ದ್ರಾವಿಡ ಸಂಘಟನೆಳು ಸ್ಥಾಪನೆಗೊಂಡಾಗ ಅದುವರೆಗೆ ದನಿಯೆತ್ತದ ಶೋಷಿತ ಸಾಮಾಜಿಕ ಗುಂಪುಗಳು ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳಲಾರಂಭಿಸಿದವು.

**ಪರಾಮರ್ಶನ ಗ್ರಂಥಗಳು**


- ಚಂದ್ರಪ್ಪ ಸಿ. (2018). *ದ್ರಾವಿಡ ಚೇತನಾ ಪೆರಿಯಾರ.* ಬೋಧಿವೃಕ್ಷ ಪ್ರಕಾಶನ.
- ಮುನಿವೆಂಕಟಪ್ಪ ಬಿ. (2014). *ದಲಿತ ಚಳುವಳಿ ಮತ್ತು ಸಾಹಿತ್ಯ.* ತನುಮನ ಪ್ರಕಾಶನ.
- ಪೆರಿಯಾರ್. (2014). *ಪೆರಿಯಾರ್ ಕ್ರಾಂತಿ ಕಿಡಿ.* (ಮಾಯಿಗೌಡ. ಕೆ, ಅನು.) ಸಪ್ನ ಬುಕ್ ಹೌಸ್.
- ಪೆರಿಯಾರ್. (2016). *ಅಸ್ಪೃಶ್ಯತೆ ವೈಕಂ ಸತ್ಯಗ್ರಹ.* (ಸುಜ್ಞಾನಮೂರ್ತಿ. ಬಿ, ಅನು.) ಲಡಾಯಿ ಪ್ರಕಾಶನ.
- ಪೆರಿಯಾರ್ (2016). *ಸ್ವಾಭಿಮಾನದ ಮದುವೆಗಳು.* (ಸುಜ್ಞಾನಮೂರ್ತಿ. ಬಿ, ಅನು.) ಲಡಾಯಿ ಪ್ರಕಾಶನ.
- ರಂಗಸ್ವಾಮಿ (ಸಂ.) (2017). *ಪೆರಿಯಾರ ಬರಹ ಮತ್ತು ಭಾಷಣಗಳ ಸಂಗ್ರಹ.* ಲಕ್ಷ್ಮಿ ಮುದ್ರಣಾಲಯ.
- ವಿರೂಪಾಕ್ಷಿ ಪೂಜಾರಹಳ್ಳಿ (ಸಂ.) (2007). *ಪರಿಯಾರರ ವಿಚಾರ ಧಾರೆ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ.